4

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ,
ಬೆಂಗಳೂರು-01

ಸಿ1(6) /ದೈ.ಶಿ.ಪರಿ.ಹು.ಬಡ್ತಿ-58/2011-12 ದಿನಾಂಕ:- 10-06-2013

**ಅಧಿಸೂಚನೆ**

ವಿಷಯ:-ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯಿಂದ ದೈಹಿಕ ಶಿಕ್ಷಣ ಪರಿವೀಕ್ಷಕರು, ಗ್ರೂಪ್-ಬಿ ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ

ಉಲ್ಲೇಖ:-1. ಸರ್ಕಾರದ ಆದೇಶ ಸಂಖ್ಯೆ ಇಡಿ 95 ಯೋಯೋಕ 2007 ದಿನಾಂಕ:30-08-2007
2. ಇಡಿ 250 ಡಿಪಿಐ 2006 ದಿನಾಂಕ:22-02-2008
3 ದಿನಾಂಕ: 03-08-2012ರಂದು ನಡೆದ ಇಲಾಖಾ ಮುಂಬಡ್ತಿ ಸಭಾ ನಡವಳಿ
4. ದಿನಾಂಕ: 10-06-2013 ರಂದು ನಡೆದ ಕೌನ್ಸಿಲಿಂಗ್

&&&

**ಪ್ರಸ್ತಾವನೆ :-**

ಸರ್ಕಾರದ ಆದೇಶ ಸಂಖ್ಯೆ ಇಡಿ 95 ಯೋಯೋಕ 2007 ದಿನಾಂಕ:30-08-2007 ರಲ್ಲಿ 202 ಶಿಕ್ಷಣ ಸಂಯೋಜಕರು (ದೈಹಿಕ ಶಿಕ್ಷಣ) ಹುದ್ದೆಗಳನ್ನು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರು, ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿದೆ. ಹಾಗೂ ಸದರಿ ಗ್ರೂಪ್-ಬಿ ಹುದ್ದೆಗಳಿಗೆ ಹಿಂದಿನ ವೇತನ ಶ್ರೇಣಿ ರೂ.11,400-21,600 ಈಗಿನ ವೇತನ ಶ್ರೇಣಿ ರೂ.(22,800-43,200) ಎಂದು ಬದಲಿ ಪದನಾಮೀಕರಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ (1)ರ ಆದೇಶದನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯಿಂದ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ದೈಹಿಕ ಶಿಕ್ಷಣ ಪರಿವೀಕ್ಷಕರು, ಹುದ್ದೆಗಳಿಗೆ ಜೇಷ್ಠತೆ, ವಿದ್ಯಾರ್ಹತೆಯಿಂದ ಅರ್ಹರಾಗುವ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದಿಂದ ತುಂಬಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಕಲ್ಪಿಸಿದೆ.

ಗ್ರೂಪ್-ಬಿ ತತ್ಸಮಾನ ಹುದ್ದೆಯಾದ ದೈಹಿಕ ಶಿಕ್ಷಣ ಪರಿವೀಕ್ಷಕರು ವೃಂದದ ಹುದ್ದೆಗಳಿಗೆ ಉಲ್ಲೇಖ (2)ರ ಆದೇಶದನ್ವಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರನ್ನು ನೇಮಕಾತಿ ಪ್ರಾಧಿಕಾರವೆಂದು ನಿಗಧಿಪಡಿಸಿ ಆದೇಶ ಮಾಡಲಾಗಿದೆ

ಈ ಸಂಬಂಧ ಇಲಾಖೆಯ ವಿವಿಧ ಕಛೇರಿಯ ಮುಖ್ಯಸ್ಥರಿಂದ ಬಡ್ತಿಗೆ ಅರ್ಹರಿರುವ ಶಿಕ್ಷಕರುಗಳ ಬಡ್ತಿ ಪ್ರಸ್ತಾವನೆಗಳನ್ನು ಪಡೆದು ಜೇಷ್ಠತೆ/ಇಲಾಖಾ ಪರೀಕ್ಷೆ/ ಕಾರ್ಯನಿರ್ವಹಣಾ ವರದಿ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಬಡ್ತಿಗೆ ಅರ್ಹರಿರುವ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರುಗಳ ವಿರುದ್ಧ ಯಾವುದೇ ದೂರು, ಶಿಸ್ತು ಪ್ರಕರಣ ಇಲ್ಲದಿರುವುದನ್ನು ದೃಢಪಡಿಸಿಕೊಂಡು ದಿನಾಂಕ:-03-08-2012ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಮುಂದೆ ಮಂಡಿಸಿ ಮುಂಬಡ್ತಿ ಸಮಿತಿಯು ಅರ್ಹರೆಂದು ಪರಿಗಣಿಸಿರುವ 47 ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ "ಬಿ" ವೃಂದದ ದೈಹಿಕ ಶಿಕ್ಷಣ ಪರಿವೀಕ್ಷಕರು ಹುದ್ದೆಗೆ ಬಡ್ತಿ ನೀಡಲು ಉಲ್ಲೇಖ (3)ರ ಇಲಾಖಾ ಮುಂಬಡ್ತಿ ಸಭೆಯಲ್ಲಿ ನಿರ್ಧರಿಸಲಾಯಿತು. ಅದರಂತೆ ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ದಿನಾಂಕ:10-06-2013ರಂದು ಕೌನ್ಸಿಲಿಂಗ್ ನಡೆಸಿ ಅವರುಗಳ ಆಯ್ಕೆ ಮಾಡಿಕೊಂಡ ಹುದ್ದೆ/ಸ್ಥಳಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ:-**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ ಕರ್ನಾಟಕ ರಾಜ್ಯ ಸಿವಿಲ್ ಸೇವಾ(ಬಡ್ತಿ, ವೇತನ, ಮತ್ತು ಪಿಂಚಣಿ ನಿಯಂತ್ರಣ) ಕಾಯ್ದೆ 1973ರ ಭಾಗ-9ರನ್ವಯ 2012ನೇ ಪರಿಷ್ಕೃತ ವೇತನ ನಿಯಮದ ವೇತನ ಶ್ರೇಣಿ ರೂ.22,800-43,200ರ ಗ್ರೂಪ್-ಬಿ ವೃಂದದ ಹುದ್ದೆಯಾದ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರ ಹುದ್ದೆಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರುಗಳಿಗೆ ಸ್ಥಾನಪನ್ನ ಬಡ್ತಿ ನೀಡಿ ಆದೇಶಿಸಿದೆ.

| ಕ್ರಸಂ | ಪದನಾಮ ಮತ್ತು ವಿಳಾಸ | ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆ ಮತ್ತು ಸ್ಥಳ |
|---|---|---|
| 1 | ನಾಗರಾಜ ಗಾಳಿ ದೈಹಿಕ ಶಿಕ್ಷಣ ಶಿಕ್ಷಕರು ಸರ್ಕಾರಿ ಪ.ದವಿ ಪೂ.ಕಾಲೇಜು ಹೊನ್ನಾಳಿ ದಾವಣಗೆರೆ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾವ ಇಲಾಖೆ, ಭದ್ರಾವತಿ ಶಿವಮೊಗ್ಗ ಜಿಲ್ಲೆ |
| 2 | ಆರ್.ನರೇಂದ್ರ ಮೂರ್ತಿ, ದೈಹಿಕ ಶಿಕ್ಷಣ ಶಿಕ್ಷಕರು ಸ.ಪ.ಪೂ(ಪ್ರೌ.ಶಾಲಾ ವಿಭಾಗ) ದೊಡ್ಡಬಳ್ಳಾಪುರ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಯಲಹಂಕ ಬೆಂಗಳೂರು ಉತ್ತರ ವಲಯ–4 |
| 3 | ಎಸ್.ವೈ.ಅಶ್ವತಪ್ಪ ದೈಹಿಕ ಶಿಕ್ಷಣ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ, ಗರಣಿ ಮಧುಗಿರಿ ತಾ. ಮಧುಗಿರಿ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಗುಬ್ಬಿ, ತುಮಕೂರು ಜಿಲ್ಲೆ |
| 4 | ಆರ್.ತಿಮ್ಮೇಶ ದೈಹಿಕ ಶಿಕ್ಷಣ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಎಂ.ಜಿ.ದಿಬ್ಬ ಹೊಸದುರ್ಗ ತಾ. ಚಿತ್ರದುರ್ಗ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಅರಸೀಕೆರೆ, ಹಾಸನ ಜಿಲ್ಲೆ |
| 5 | ಎ.ಐ ಬಡಿಗೇರ ದೈಹಿಕ ಶಿಕ್ಷಣ ಶಿಕ್ಷಕರು ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಮೊಳಕಾಲ್ಮೂರು ಚಿತ್ರದುರ್ಗ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಅಥಣಿ, ಬೆಳಗಾವಿ ಜಿಲ್ಲೆ |
| 6 | ಶ್ರೀನಿವಾಸಪ್ಪ ದೈಹಿಕ ಶಿಕ್ಷಣ ಶಿಕ್ಷಕರು ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ಅಗಲಕುರ್ಕಿ ಚಿಕ್ಕಬಳ್ಳಾಪುರ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಶಿಕ್ಷಣ ಇಲಾಖೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ |
| 7 | ಎ.ಜಿ.ಗುರುಪ್ರಕಾಶ್, ದೈಹಿಕ ಶಿಕ್ಷಣ ಶಿಕ್ಷಕರು ಸ.ಪ.ಪೂ.ಕಾಲೇಜು(ಪ್ರೌಢಶಾಲಾ ವಿಭಾಗ) ಕೊರಟಗೆರೆ ಮಧುಗಿರಿ ಶೈಕ್ಷಣಿಕ ಜಿಲ್ಲೆ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ |
| 8 | ಲಾಡೇ ವೈಜನಾಥ್ ದೈಹಿಕ ಶಿಕ್ಷಣ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಹಳ್ಳಿಖೇಡ ಬೀದರ್ | ದೈಹಿಕ ಶಿಕ್ಷಣ ಪರಿವೀಕ್ಷಕರು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,ಖಾನಾಪುರ, ಬೆಳಗಾವಿ ಜಿಲ್ಲೆ |

ಷರತ್ತುಗಳು:–

01. ಈ ಆದೇಶದನ್ವಯ ಸ್ಥಾನಪನ್ನಬಡ್ತಿ ಹೊಂದಿದವರು ಅಂತರ್ ಜಾಲದಲ್ಲಿ ಪ್ರಕಟಿಸಿದ ಆದೇಶದ ಪ್ರತಿ ಪಡೆದು ಸಂಬಂಧಿಸಿದ ಅಧಿಕಾರಿಗಳಿಗೆ ನೀಡಿ ಬಿಡುಗಡೆಗೊಳ್ಳಲು ತಿಳಿಸಿದೆ. ಹಾಗೂ ಒಂದು ವಾರದೊಳಗೆ ಬಿಡುಗಡೆ ಮಾಡಲು ಸೂಕ್ತ ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದೆ.
02. ಈ ಆದೇಶದನ್ವಯ ಸ್ಥಾನಪನ್ನಬಡ್ತಿ ಹೊಂದಿದವರು ಒಂದು ವರ್ಷ ಪ್ರೊಭೇಷನರಿ ಅವಧಿಯಲ್ಲಿ ಇರುವರು.
03. ಕರ್ತವ್ಯಕ್ಕೆ ಹಾಜರಾದ ಬಗ್ಗೆ ಈ ಕಛೇರಿಗೆ, ಮಹಾಲೇಖಪಾಲರಿಗೆ, ವರದಿ ಸಲ್ಲಿಸುವುದು.
04. ಈ ಶಿಕ್ಷಕರುಗಳು ಸ್ಥಾನಪನ್ನ ಬಡ್ತಿ ಹೊಂದಿದ ಹುದ್ದೆಯ ಮೇಲೆ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ಪಡೆಯಲು ಮಹಾಲೇಖಪಾಲರಿಂದ ವೇತನ ದೃಢೀಕರಣವನ್ನು (Pay Slip) ಪಡೆಯಬೇಕಾಗಿರುವುದರಿಂದ ಆದೇಶದ ಪ್ರತಿ ಹಾಜರಾದ ಬಗ್ಗೆ C.T.C ಮತ್ತು ಮೂಲ ಸೇವಾಪುಸ್ತಕವನ್ನು ಸಂಬಂಧಪಟ್ಟ ಉಪನಿರ್ದೇಶಕರು( ಆಡಳಿತ) ಇವರ ಮೂಲಕ ಬಡ್ತಿ ಹೊಂದಿದ ಹಾಗೂ ಬಡ್ತಿ ಹುದ್ದೆಯಲ್ಲಿ ಹಾಜರಾದ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿ **ಉಪನಿರ್ದೇಶಕರ ದೃಢೀಕರಣದೊಂದಿಗೆ ನೇರವಾಗಿ ಮಹಾಲೇಖಪಾಲರಿಗೆ ಸಲ್ಲಿಸುವುದು.**
05. ಸೇವಾ ಪುಸ್ತಕದಲ್ಲಿ ಬಡ್ತಿ ಆದೇಶವನ್ನು ದಾಖಲಿಸಿ ಸಂಬಂಧಿಸಿದ ಕಛೇರಿ ಮುಖ್ಯಸ್ಥರು ದೃಢೀಕರಿಸುವುದು.
06. ಆದೇಶ ತಲುಪಿದ ಒಂದು ವಾರದೊಳಗೆ ಕರ್ತವ್ಯಕ್ಕೆ ಹಾಜರಾಗಿ ಹಾಜರಾದ ಬಗ್ಗೆ ಈ ಕಛೇರಿಗೆ ಮಹಾಲೇಖಪಾಲರಿಗೆಹಾಗೂ ಸಂಬಂಧಿಸಿದ ಎಲ್ಲಾ ಮೇಲಾಧಿಕಾರಿಗಳಿಗೆ ಸಿ.ಟಿ.ಸಿಯೊಂದಿಗೆ ವರದಿ ಸಲ್ಲಿಸುವುದು.

07. ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ಈ ಆದೇಶದನ್ವಯ ಗ್ರೂಪ್-ಬಿ ಹುದ್ದೆಗೆ ಹಾಜರಾದವರೆಲ್ಲರ ಸೇವಾ ವಿವರಗಳನ್ನು ಪರಿಶೀಲಿಸಿ ಜಿಲ್ಲಾವಾರು ಹಾಜರಾದ ದೈಹಿಕ ಶಿಕ್ಷಣ ವಿಷಯ ಪರಿವೀಕ್ಷಕರ ಮಾಹಿತಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

(ಎಸ್.ಆರ್.ಉಮಾಶಂಕರ್)
ಆಯುಕ್ತರು

**ಪ್ರತಿಗಳನ್ನು:**

1] ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.

2] ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ

3] ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

4] ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ/ಗುಲಬರ್ಗಾ ಇವರ ಮುಂದಿನ ಕ್ರಮಕ್ಕಾಗಿ

5] ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.

6] ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ/ಸಹ ನಿರ್ದೇಶಕರು (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.

7] ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಗೆ.

8] ಬೆಂಗಳೂರು ಆಯುಕ್ತಾಯಲದ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಗೆ ನಿರ್ದೇಶಕರು(ಪ್ರೌಢಶಿಕ್ಷಣ) ಆಯುಕ್ತರ ಕಛೇರಿ,ರವರಿಗೆ.

9] ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ ಇವರ ಮಾಹಿತಿಗಾಗಿ

10] ಉಪನಿರ್ದೇಶಕರು (ದೈಹಿಕ ಶಿಕ್ಷಣ) ಆಯುಕ್ತರ ಕಛೇರಿ ಬೆಂಗಳೂರು.

11] ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ

12] ಸಂಬಂಧಿಸಿದ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ಮುಂದಿನ ಕ್ರಮಕ್ಕಾಗಿ

13] ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ

14] ಮಾನ್ಯ ಅಪರ ಆಯುಕ್ತರು(ಆಡಳಿತ) ಆಪ್ತ ಶಾಖೆಗೆ

15] ಸಂಬಂಧಪಟ್ಟ ಅಧಿಕಾರಿಗಳಿಗೆ/ಶಿಕ್ಷಕರು

16] ಕಛೇರಿ ಪ್ರತಿ